ಪಿ.ಜಿ. ರಾವ್, ಶಿವಮೊಗ್ಗ
ಹುಡುಗಿಯರು ಬಿಸಿ ಟೀಗಿಂತಲೂ ತಣ್ಣನೆಯ ಐಸ್‌ಕ್ರೀಂ ತುಂಬಾ ಇಷ್ಟ ಪಡಲು ಕಾರಣವೇನು?



ಮಾತಾಡಿ ಆಡಿ ಬಿಸಿ ಆಗಿರುವ ನಾಲಿಗೆಗೆ ಬಿಸಿಗಿಂತ ತಂಪೇ ಹಿತವಾಗುವುದಂತೆ.

ಬಿ. ಚಂದ್ರೇಗೌಡ, ಬೆಂಗಳೂರು
ಶಿಲಾಯುಗಕ್ಕೂ, ಕಲಿಯುಗಕ್ಕೂ ಇರುವ ವ್ಯತ್ಯಾಸ?
ಪೋಸ್ಟಿಂಗ್‌ಗಳ ಗುಣಮಟ್ಟ ಅದೇ ಆದರೂ ವಾಲ್ ಬೇರೆ ಆಗ ಸ್ಟೋನ್ ವಾಲ್; ಈಗ ಫೇಸ್‌ಬುಕ್ ವಾಲ್.

ಅಮರಯ್ಯಾ ಪತ್ರಿಮಠ, ಸುರಪುರ
ಛಲಬಿಡದ ತ್ರಿವಿಕ್ರಮ ಯಾರು?
ತ್ರಿ (ಮೂರು) 'ವಿ'ಗಳಾದ ವಿನಯ, ವಿಚಾರ, ವಿವೇಕಗಳನ್ನು ಅರಿತವನು.

ಎಂ.ಎ. ಕುಮಾರ್, ಬೆಂಗಳೂರು
ಶುಕ್ರವಾರವೇ ಲಕ್ಷ್ಮಿಯನ್ನು ಪೂಜಿಸಲು ಕಾರಣವೇನು?



ಒಲಿದು ಬಂದರೆ ವೀಕೆಂಡ್ ಷಾಪಿಂಗ್‌ಗೆ ಅನುಕೂಲವಾಗುತ್ತದೆಂದು.

ಆರತಿ ಘಟಿಕಾರ್, ದುಬೈ
ಗಿರಿಜಾ ಮೀಸೆಯಲ್ಲಿ ಗಿರಿಜಾ ಯಾರು ರಾಮ್?
ಅದು 'ದಾದಾಗಿರಿಜಾ' ಎನ್ನುವುದರ ಷಾರ್ಟ್ ಫಾರ್ಮ್. ದಾದಾಗಿರಿ ತೋರಲೆಂದೇ ಹುಟ್ಟಿದ ಮೀಸೆಯೇ ಗಿರಿಜಾ ಮೀಸೆ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಕಟ್ಟಡ ಕಟ್ಟುವಾಗ ರಾಕ್ಷಸನ ಮುಖವಾಡ ನೇತುಹಾಕುವ ಉದ್ದೇಶವೇನು ಗುರೂಜಿ?
ರಾಕ್ಷಸರಿಗೆ ಲಂಚ ಕೊಟ್ಟು, ರಾಕ್ಷಸರಂತೆ ಕಾಡುವ ಕಂಟ್ರಾಕ್ಟರನ್ನೂ ಒಲೈಸಿ ಕಟ್ಟುತ್ತಿರುವ ಕಟ್ಟಡವೆಂದು ಸೂಚಿಸಲು.

ಆರ್. ಮಧುಸೂದನ್, ಹಾಸನ
ವಿದ್ಯುತ್, ವಿದ್ವತ್; ಇವೆರಡರಲ್ಲಿ ಹೆಚ್ಚು ಶಕ್ತಿಶಾಲಿ ಯಾವುದು ರಾಮ್?
ವಿದ್ವತ್ತೇ; ವಿದ್ಯುತ್ ತಂತಿಯಿಂದ ತಂತಿಗೆ ಹರಿಯುತ್ತದೆ; ವಿದ್ವತ್ತು ಸಂತತಿಯಿಂದ ಸಂತತಿಗೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಸತ್ಯವಂತರಾಗಿ, ಪ್ರಾಮಾಣಿಕರಾಗಿ ಬಾಳುವುದನ್ನು ಹುಚ್ಚುತನ ಎನ್ನುವುದು ಸರಿಯೇ?
ಪಾಪ! ಅವರ ದೃಷ್ಟಿ ಹಾಗಿದೆಯಷ್ಟೆ. ಹುಚ್ಚರ ಕಣ್ಣಲ್ಲಿ ಸಾಮಾನ್ಯರು ಹುಚ್ಚರಂತೆ ಕಾಣುತ್ತಾರೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಸಂಕಟ ಬಂದಾಗ ವೆಂಕಟರಮಣ ಸುಖವಿದ್ದಾಗ?
ಬಿಂಕದ ರಮಣ!

ನರಸಿಂಹ ಪೈ, ಕಾಸರಕೋಡ
ಸಾರಾಯಿ ಅಂಗಡಿಗೆ 'ಅಮೃತ್ ಡ್ರಿಂಕ್ಸ್' ಎಂಬ ಹೆಸರೇಕೆ?
ಅಮೃತ = ಮೃತನಲ್ಲದವನು;
ಡ್ರಿಂಕ್ಸ್ = ಕುಡಿಯುತ್ತಾನೆ. ಸಾಯುವವರೆಗೆ ಕುಡುಕ ಸಾರಾಯಿದಾಸನೇ.

ಜಾಕೋಬ್ ಡಿಸೋಜ, ಕುರುವಳ್ಳಿ
ಎದುರು ಬಂದಾಗ ಬಹುವಚನ, ಹಿಂದುಗಡೆಯಿಂದ ಏಕವಚನ. ಏಕೆ ಸಾರ್ ಹೀಗೆ?
ಸರ್ವೇ ಜನಾಃ ಸುಖಿನೋ ಭವಂತು ಅಲ್ಲವೇ! ನಿಮ್ಮ ಖುಷಿಗೆ ಇದು, ಅವರ ಖುಷಿಗೆ ಅದು.

ದಿನೇಶ್, ಗುಡ್ಡದೂರು
ಮದ್ಯದ ಜಾಹೀರಾತಿನಲ್ಲೂ ಮಹಿಳೆಯರನ್ನು ಬಳಸಲು ಕಾರಣವೇನು ರಾಮ್?
ಕಂಟ್ರೋಲ್ ಮೀರಿದರೆ ಎರಡರಿಂದಲೂ ಸೂಪರ್ ಕಿಕ್ ಖಚಿತ ಎಂದು ತೋರಿಸಲು.

ಬೂಕನಕೆರೆ ವಿಜೇಂದ್ರ, ಮೈಸೂರು
ಪರೀಕ್ಷೆಗಳೇ ಜೀವನದ ಮಾನದಂಡವೆ?
ಊಹೂಂ, ಇಲ್ಲಿನ ಮಾರ್ಕಿಗಿಂತ ಉದ್ಯೋಗದಲ್ಲಿ ಪಡೆವ ರಿಮಾರ್ಕೇ ಮಾನದಂಡ.

## ಬಹುಮಾನಿತ ಪ್ರಶ್ನೆ

ಬಿ.ಎಸ್. ರಮೇಶ್, ಮಣಿಪಾಲ
ಶಾಲೆಯಲ್ಲಿ 30 40 ಮಕ್ಕಳಿಗೆ ಪಾಠ ಹೇಳುವ ಶಿಕ್ಷಕಿಗಿರುವಷ್ಟು ತಾಳ್ಮೆ ಮಗುವಿನ ಅಮ್ಮನಿಗೇಕೆ ಇರುವುದಿಲ್ಲ?
ಅಮ್ಮನಿಗೆ ಕಿರಿಕಿರಿ ಮಾಡಿದ ಮಗುವಿಗೆ 'ಗೆಟ್ ಔಟ್' ಎನ್ನುವ ಸೌಲಭ್ಯ ಇರುವುದಿಲ್ಲವಲ್ಲ...

ವಿ. ಹಮೀದ್, ವಿಟ್ಲ
ನಾರಿ ಸ್ವರ್ಗಕ್ಕೆ ದಾರಿ ಎಂದು ನಾರಿಯ ಕೈ ಹಿಡಿದಾತ ಈಗ ಪೇಚಾಟಕ್ಕೆ ಸಿಲುಕಿದ್ದಾನಲ್ಲಾ..?
ನಿಜ. ಸ್ವರ್ಗಕ್ಕೆ ಹೋಗಬೇಕಾದರೆ ಸಾಯಬೇಕು ಎಂದು ಈಗಷ್ಟೇ ಅವನಿಗೆ ತಿಳಿಹೇಳಿದಳಂತೆ.

ಜವಳಿ ಜಯ್ಯಣ್ಣ, ದಾವಣಗೆರೆ
ಸ್ವರ್ಗ ಎಂದರೆ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರ ನೆನಪಾಗುತ್ತದೆ. ನರಕ ಎಂದರೆ?
ಅಂತಹವರು ಯಾರಾದರೂ ಕೈಕೊಟ್ಟ ದಿನಗಳ ನೆನಪಾಗುತ್ತದೆ.

ಹರಿತಸ, ಬೆಂಗಳೂರು
ಲಿಪ್‌ಸ್ಟಿಕ್‌ಗೂ, ವಾಕಿಂಗ್ ಸ್ಟಿಕ್‌ಗೂ ಏನು ವ್ಯತ್ಯಾಸ?



ಅಧರಕ್ಕೊಂದು, ಆಧಾರಕ್ಕೊಂದು.

ಕುಮಾರ ಚಲವಾದಿ, ಹಾಸನ
ಮಕ್ಕಳು ನಗುನಗುತ್ತಾ ಶಾಲೆಗೆ ಹೋಗಲು ನಿಮ್ಮಲ್ಲಿ ಏನಾದರೂ ತಂತ್ರವಿದೆಯೆ?
ಮನೆಯಲ್ಲಿ ಶಾಲೆಗಿಂತ ಹೆಚ್ಚು ಬೋರ್ ಹೊಡೆಸಿದರಾಯ್ತು.

ವೀಣಾ ರವಿ ಪೈ, ಕಾಸರಕೋಡ
ನಾಟಕದಲ್ಲಿ ಹೆಣ್ಣು ಚೆನ್ನಾಗಿದ್ದಷ್ಟೂ ಊರಿನಲ್ಲಿ ಕಲಾಭಿಮಾನಿಗಳು ಹೆಚ್ಚು. ಏಕೆ?
ರೆಕ್ಕೆಪುಕ್ಕ ಸುಟ್ಟರೂ ಸರಿ, ದೀಪವನ್ನು ಬಿಡಲಾರೆ ಎನ್ನುವ ದೀಪದ ಹುಳದ ಚಪಲ.

■ ರಾಮ್